## ಸುಳ್ಳು ಸುದ್ದಿಗಳ ಸುಗ್ಗಿಕಾಲ

ಡಾ. ಪ್ರೇಮಲತ ಬರೆದಿರುವ ಮುಖಪುಟ ಲೇಖನ ಸಮಯೋಚಿತವಾಗಿದೆ. ಅನಾದಿ ಕಾಲದಿಂದಲೂ ಬಂದ ಈ ಫೇಕ್‌ನ್ಯೂಸ್ ಪಿಡುಗು ಇತ್ತೀಚಿನ ದಿನಗಳಲ್ಲಿ ಸೋಷಿಯಲ್ ಮೀಡಿಯ ಬಂದ ನಂತರವಂತೂ ಕ್ಷಣಾರ್ಧದಲ್ಲಿ ಸುನಾಮಿಯಂತೆ ಹಬ್ಬಿಬಿಡುತ್ತಿದೆ. ಇದಲ್ಲದೆ ಇದಕ್ಕೆ ವಾದ–ಪ್ರತಿವಾದ, ಹಗೆತನ, ಸುಳ್ಳು ಸುದ್ದಿ ಹಬ್ಬಿಸಿ ತಮಾಷೆ ನೋಡುವ ಜನರೂ ಸಾಕಷ್ಟಿದ್ದಾರೆ. ಅಲ್ಲದೆ ಅವುಗಳನ್ನು ಆದಷ್ಟು ತ್ವರಿತಗತಿಯಲ್ಲಿ ಶೇರ್ ಮಾಡಿ ತಾವೇ ಇದಕ್ಕೆ ಪ್ರೋತ್ಸಾಹಿಸುವಂತೆ ಪೋಸ್ ಕೊಡುವ ಜನರು ಕಮ್ಮಿಯಿಲ್ಲ. ಇಂಥವು ಯುವ ಪೀಳಿಗೆಯ ದಾರಿ ತಪ್ಪಿಸುವಂತೆ ಮಾಡುತ್ತದೆ.

—ಶ್ರುತಿ ರಿಗ್ರೆಟ್ ಅಯ್ಯರ್, ಬೆಂಗಳೂರು




ಲೇಖನ ಮಾಹಿತಿಪೂರ್ಣವಾಗಿದೆ. ಒಂದು ವಿಷಯದಲ್ಲಿ ತಪ್ಪಾಗಿದೆ. ಗೆಲಿಲಿಯೋ ಸತ್ತದ್ದು 08.01.1642ರಲ್ಲಿ; ಗೃಹಬಂಧನದಲ್ಲಿ ಇರುವಾಗ. ಬರಹದಲ್ಲಿರುವ ಹಾಗೆ ಹತ್ಯೆಯಾಗಿ ಅಲ್ಲ.

—ಎವಿಕೆ, ಬೆಂಗಳೂರು

ಲೇಖನದಲ್ಲಿ ಹೇಳಿದಂತೆ ಸುಳ್ಳಿನ ಉದ್ಯಮ ಇಂದು ಬರೀ ವ್ಯಾಪಕವಾಗಿಯಷ್ಟೇ ಅಲ್ಲ, ಅನಾಹುತಕಾರಿಯೂ ಆಗಿದೆ. ಆದರೆ ಜನರೂ ಕೂಡ ದಡ್ಡರಲ್ಲವಲ್ಲ! ಅವರು ಸುಳ್ಳು ಬಿತ್ತರವಾಗುತ್ತಿದ್ದಂತೆಯೇ ವಿಚಾರ ಮಂಥನಕ್ಕೆ ತೊಡಗುತ್ತಾರೆ. ಸುಳ್ಳುಗಳನ್ನು ದಿಢೀರ್ ನಂಬುವ ಯುವ ಮನಸ್ಸುಗಳಿಂದ ಮತ್ತು ಕೆಲವೇ ಕೆಲವು ಸ್ವಾರ್ಥಗಳಿಂದ ಮಾತ್ರ ಅನಾಹುತ ಆಗುತ್ತಿದೆ.

—ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ಜಲ ಸಂರಕ್ಷಣೆ...

‘ನಿಮ್ಮೊಡನೆ’ ಅಂಕಣದಲ್ಲಿ ಎಸ್. ಉದಯಕುಮಾರ್ ಜಲಸಂರಕ್ಷಣೆ ಬಗ್ಗೆ ಸೂಚಿಸಿರುವ ಉಪಾಯಗಳು ಗಮನಾರ್ಹವಾಗಿದೆ. ಅಭಿವೃದ್ಧಿಯ ಸೋಗಿನಲ್ಲಿ ನಡೆಯುತ್ತಿರುವ ವೃಕ್ಷಸಂಪತ್ತಿನ ಹರಣ ವರುಷದಿಂದ ವರುಷಕ್ಕೆ ಹೆಚ್ಚುತ್ತಿದೆ. ಮಳೆರಾಯನ ಆಗಮನ ಕಡಿಮೆಯಾಗಿ ಹಲವು ಬಾರಿ ಅತಿ ಕಡಿಮೆ ಮಳೆಯಾಗಿ ಜಲಕ್ಷಾಮ ಉಂಟಾಗಿ ನೀರಿಗಾಗಿ ಹಾಹಾಕಾರ ಹೆಚ್ಚುತ್ತಿದೆ. ಕಾರ್ಖಾನೆಗಳಿಂದ ಜಲ ಕಲುಷಿತಗೊಂದು ಇರುವ ಅಲ್ಪಸ್ವಲ್ಪ ಜಲವು ನೀರಿನ ದಾಹವನ್ನು ತಣಿಸಲು ಕಷ್ಟವೆನಿಸಿದೆ. ಸರ್ಕಾರವು ಈ ದಿಸೆಯಲ್ಲಿ ಪರ್ಯಾಯ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಸಾಕಷ್ಟು ಮುತುವರ್ಜಿ ವಹಿಸುತ್ತಿಲ್ಲ.

—ಎಸ್.ಪ್ರಭಾ, ಬೆಂಗಳೂರು

ಪ್ರಾಣಿ, ಪಕ್ಷಿ, ಮನುಜಕುಲಕ್ಕೆ ಜೀವಾಮೃತ ಅನಿವಾರ್ಯ. ಮನುಷ್ಯ ಮರ ಕಡಿದು, ಕಡಲು, ಹೊಳೆ ತಟಗಳನ್ನೆಲ್ಲ ಹಿಬ್ಬಿ, ಒತ್ತುವರಿಗಳ ಸಾಮ್ರಾಜ್ಯ ಕಟ್ಟಿ, ಪ್ರಕೃತಿಯ ಎಲ್ಲ ಬಯಲುಗಳನ್ನೂ ಸ್ಪರ್ಶಿಸಿ ಗಾಯಗೊಳಿಸುವುದರ ಮೂಲಕ ದಾನವನಾಗಿಬಿಟ್ಟಿದ್ದಾನೆ. ಅಣ್ಣಾವ್ರ ‘ಏನೆಂದು ನಾ ಹೇಳಲಿ ಮಾನವನಾಸೆಗೆ ಕೊನೆಯಲ್ಲಿ! ಕಾಣೊದೆಲ್ಲ ಬೇಕು ಎಂಬ ಹಠದಲ್ಲಿ ಯಾರನ್ನು ಪ್ರೀತಿಸನು ಜಗದಲ್ಲಿ....’ ಎನ್ನುವ ಹಾಡು ಈ ಮನುಷ್ಯನ ಸ್ವಭಾವಕ್ಕೆ ಹಿಡಿದ ಕನ್ನಡಿಯಂತಿದೆ.

—ಎಚ್. ಆನಂದ್‌ಕುಮಾರ್, ಚಿತ್ರದುರ್ಗ



### ಲಲಾಟಲಿಖಿತ

‘ಲಹರಿ’ ಅಂಕಣದಲ್ಲಿ ಗೌತಮ ಬರೆದಿರುವ ಲೇಖನ ಚೆನ್ನಾಗಿದೆ. ಪ್ರತಿದಿನ ಎಷ್ಟೇ ವಾಕಿಂಗ್ ಮಾಡಿ ದೇಹ ದಣಿಸಿದರೂ ಕೂಡ ಆಹಾರದಲ್ಲಿ ನಿಯಂತ್ರಣ ಇಲ್ಲದೆ ಹೋದರೆ ಪ್ರಯೋಜನವಿಲ್ಲ ಎಂಬುದನ್ನು ಬಹಳ ಸೊಗಸಾಗಿ ವಿವರಿಸಿ ಹೊಟ್ಟೆಬಾಕರನ್ನು ಎಚ್ಚರಿಸಿದ್ದಾರೆ.

ಪ.ಚಂದ್ರಕುಮಾರ ಗೌನಹಳ್ಳಿ

### ತಮ್ಮ ಹೆಸರೇ ಬದಲಿಸಿಕೊಳ್ಳಬಹುದಲ್ಲವೇ?

21 ಮಾರ್ಚ್ ಸಂಚಿಕೆಯ ‘ಸಮುದ್ರ ಮಥನ’ ಪುಟದಲ್ಲಿ ಸುಭಾಷ್ ಬಿ. ಕೋಟಿಯವರು ‘ಸುಧಾ’ ಪತ್ರಿಕೆಯ ಮೇಲಿನ ಪ್ರೀತಿಯಿಂದ ಹೆಂಡತಿಯ ಹೆಸರನ್ನು ಸುಧಾ ಎಂದು ಬದಲಿಸಿದ್ದಾಗಿ ಬರೆದಿದ್ದಾರೆ. ಪತ್ನಿಯ ಹೆಸರನ್ನು ಬದಲಿಸುವ ಬದಲಿಗೆ ತಮ್ಮ ಹೆಸರನ್ನೇ ‘ಸುಧಾಕರ’ ಎಂದು ಬದಲಿಸಿಕೊಳ್ಳಬಹುದಿತ್ತಲ್ಲವೇ?

—ಎನ್.ಡಿ. ವೆಂಕಟಸುಬ್ಬು, ಮೈಸೂರು

### ‘ಅನಂತ’ ಕವಲುದಾರಿ



ಭಾರತೀಯ ಚಲನಚಿತ್ರರಂಗದ ಶ್ರೇಷ್ಠನಟರಲ್ಲಿ ಅನಂತ್ ನಾಗ್ ಒಬ್ಬರು ಎನ್ನುವುದು ನಿರ್ವಿವಾದ. ಪಾತ್ರಗಳ ಆಯ್ಕೆ, ಪೋಷಣೆ ಮತ್ತು ಬಿಡುಗಡೆಯ ನಂತರದ ಸ್ಪಂದನದ ವಿಷಯಗಳಲ್ಲಿ ಅವರು ನಿಜಕ್ಕೂ ‘ಕವಲು ದಾರಿ’ಯಲ್ಲಿದ್ದಾರೆ. ಅವರ ನಡೆಯನ್ನು ಜಾಣಮರೆವು ಅನ್ನಬಹುದೆ?

—ಶೋಭಾ ಮುಕುಂದ, ಕಲಬುರ್ಗಿ

### ಶಿಲೆಗಳು ಸಂಗೀತವ ಹಾಡಿವೆ...

ಡಾ. ಎನ್. ಸ್ವಾತಿಯವರ ಲೇಖನ ಸ್ವಾಗತಾರ್ಹ. ನಾವು ನೂರಾರು ಕಿ.ಮೀ. ಕ್ರಮಿಸಿ ದೇವಸ್ಥಾನ ನೋಡಿ ಅರಿಯುವುದಕ್ಕಿಂತ ‘ಸುಧಾ’ಳೇ ನಮ್ಮ ಮನೆಗೆ ಬಂದು ಇತಿಹಾಸ ಸಾರಿದ್ದಾಳೆ.

—ಪಂಡಿತರಾವ ಪಾಟೀಲ, ಸರಸಂಬಾ

### ಸಿಹಿ, ಒಗರು, ರುಚಿಯ ‘ಗೇರು ಹಣ್ಣು’

ನಮ್ಮ ಮನೆಯಲ್ಲೂ ಕೆಲವು ಗೇರುಗಿಡಗಳಿವೆ. ಈ ಗಿಡ/ಮರಗಳಲ್ಲಿ ಬೆಳೆದ ಹಣ್ಣನ್ನು ನಾವು ಯಥೇಚ್ಛ ತಿನ್ನುತ್ತಿದ್ದೇವೆ. ಆದರೆ, ಈ ಹಣ್ಣುಗಳಲ್ಲಿ ಜೀರ್ಣಕಾರಕ ಔಷಧಿ ಗುಣ ಇದೆ ಮತ್ತು ಕಬ್ಬಿಣ ಮತ್ತು ‘ಸಿ’ ಜೀವಸತ್ವ ಇದೆ ಅನ್ನುವುದು ಈ ಲೇಖನ ಓದಿದ ನಂತರ ತಿಳಿದು ಖುಷಿಯಾಯಿತು. ಅಂದಹಾಗೆ, ಈ ಹಣ್ಣಿಗೆ ನಮ್ಮೂರಿನಲ್ಲಿ ‘ಗೋವೆ ಹಣ್ಣು’ ಎಂತಲೂ ಕರೆಯುತ್ತಾರೆ.

—ನಾರಾಯಣ ಯಾಜಿ, ಶಿರಾಲಿ

### ₹20ರಲ್ಲಿ ಸಮಗ್ರ ಮಾಹಿತಿ

‘ಸುಧಾ’ ಅಂದರೆ ಅಮೃತ ಅನ್ನುವ ಅರ್ಥ ಇದೆ. ಕೇವಲ ಅಮೃತಧಾರೆ ಎರೆಯದೇ ಜೀವನದ ಸಮಗ್ರ ಸಮಸ್ಯೆಗಳಿಗೆ ಸಮಾಧಾನವೀಯುತ್ತಾ ಮನೆಯಲ್ಲಿ ಇರುವ ಹೆಣ್ಣು, ಗಂಡು, ವಯಸ್ಕರು, ಹರೆಯದವರು ಎಲ್ಲರಿಗೂ ಸಮಗ್ರ ರಾಜಕೀಯ ಮಾಹಿತಿಯನ್ನು ಹೊತ್ತು, ಅಧ್ಯಾತ್ಮಿಕ, ರುಚಿ, ಆರೋಗ್ಯಕ್ಕೆ ಸಮಸ್ತ ಅಡುಗೆ ಹೊತ್ತ ‘ಸುಧಾ’ಕ್ಕಾಗಿ ನಾವು ಪ್ರತಿವಾರ ಕಾಯುತ್ತೇವೆ.

—ಶ್ರೀನಿವಾಸ ಪದಕಿ, ಮುಂಬೈ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in